**English Translation of version proceedings of Government of Karnataka**

Sub:- Handing over of 141.59 Ha of Reserve Forest area of Bilikal West of Kamalapur village Hosapete Taluk Bellary Dist for the Creation of Sri Atal Bihari Vajpayee Zoological Park.

Ref:- 1) Letter from Principal Chief Conservator of Forests, (HOFF) Bangalore vide letter No. PCCF/C/GL-360/2012-13 Date: 30.08.2013.

2) Letter No. F. No-11-66/2004 FC Dated 13.11.2017 of M O E F (Forest Conservation Division).

**Preamble :-**

After careful examination of the letter referred in the reference for the Creation of Zoological Park named of the Sri Atal Bihari Vajpayee Zoological Park. The Government is pleased to pass the fallowing orders..........

**Government order No.Apaji 150 FWL 2013 Bangalore Dated 27. 09.2013**

In view of translocation of Mini Zoo at Bellary the Government is pleased to transfer 141.59 Ha of Bilikal Reserve Forest area survey No of Kamalapur village Hosapete Tq Bellary Dist are given below for the creation of Sri Atal Bihari Vajpayee Zoological Park.

| Village Name | Survey No | Reserve Forest area (Ha) | Patta Land (Ha) |
|---|---|---|---|
| Ingalagi | 12 | - | 3.23 |
| | 13 | - | 2.91 |
| | 14 | 3.47 | - |
| | 15 | 3.65 | - |
| | 16 | - | 1.46 |
| | 18 | 9.34 | - |
| | 19 | 3.62 | - |
| | 28 | 30.26 | - |
| Kamalapur | 1080. | 61.96 | - |
| | 1082 | - | 6.33 |
| | 1083 | 2.82 | - |
| | 1084 | 1.10 | - |
| | 1085 | 2.22 | - |
| | 1086 | 3.20 | - |
| Total | | 127.66 | 13.93 |

With a Condition that no other activity is allowed except creation of Zoological park. The ZAK Shall not rent, lease and montage the above said area.

In the name of Governor of Karnataka

(S.P. Patil)
Ministry of Environment Ecology Forest
(Wild life Projects)
Bangalore

Copy

Executive Director and
Deputy Conservator of Forests
Atal Bihari Vajpayee Zoological park
Kamalapura, Hosapete Tq. Bellary Dist

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಕಮಲಾಪುರ ಗ್ರಾಮದ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ "ಅಟಲ್ ಬಿಹಾರಿ ವಾಜಪೇಯಿ ಜ್ಯೂಯಾಲಜಿಕಲ್ ಪಾರ್ಕ್" ನಿರ್ಮಾಣ ಮಾಡಲು ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದ 141.59 ಹೆಕ್ಟೇರ್ ಜಮೀನನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರಿಗೆ ಹಸ್ತಾಂತರಿಸುವ ಕುರಿತು.

ಓದಲಾಗಿದೆ : 1) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ಇವರ ಪತ್ರ ಸಂಖ್ಯೆ:ಪಿಸಿಸಿಎಫ್/ ಸಿ/ಜಿಎಲ್-360/2012-13, ದಿನಾಂಕ: 30-08-2013.

2) ಪರಿಸರ ಮತ್ತು ಅರಣ್ಯ ಸಚಿವಾಲಯ (ಅರಣ್ಯ ಸಂರಕ್ಷಣಾ ವಿಭಾಗ), ಭಾರತ ಸರ್ಕಾರ ಇವರ ಪತ್ರ ಸಂಖ್ಯೆ: ಎಫ್.ನಂ.11-66/2004-ಎಫ್‌ಸಿ, ದಿನಾಂಕ: 13-11-2007.

*****

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 30-08-2013ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ಇವರು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಕಮಲಾಪುರ ಗ್ರಾಮದ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದ 141.00 ಹೆಕ್ಟೇರ್ ಅರಣ್ಯ ಜಮೀನನ್ನು ಅಟಲ್ ಬಿಹಾರಿ ವಾಜಪೇಯಿ ಜ್ಯೂಯಾಲಜಿಕಲ್ ಪಾರ್ಕ್ ಎಂದು ನಿರ್ಮಾಣ ಮಾಡಲು ಸದರಿ ಜಮೀನನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರಿಗೆ ಹಸ್ತಾಂತರಿಸುವ ಕುರಿತು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ ಬಳ್ಳಾರಿ ಇವರು ಸ್ಥಳ ಪರಿಶೀಲನೆ ಮಾಡಿ ನಕಾಶೆ ಹಾಗೂ ಗಡಿರೇಖೆಗಳ ವಿವರಗಳನ್ನು ದೃಢೀಕರಿಸಿ ಸಲ್ಲಿಸಿದ್ದು, ಅದರಂತೆ ಹೊಸಪೇಟೆ ತಾಲ್ಲುಕು ಕಮಲಾಪುರ ಗ್ರಾಮದ ಬಿಳಿಕಲ್ಲು ವೆಸ್ಟ್ ಕಾಯ್ದಿಟ್ಟ ಅರಣ್ಯ ಪ್ರದೇಶದ 141.00 ಹೆಕ್ಟೇರ್ ಪ್ರದೇಶವನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರಕ್ಕೆ ಹಸ್ತಾಂತರಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್, ಪರಿಸರ ಮತ್ತು ಅರಣ್ಯ ಸಚಿವಾಲಯ (ಅರಣ್ಯ ಸಂರಕ್ಷಣಾ ವಿಭಾಗ), ಭಾರತ ಸರ್ಕಾರ, ನವದೆಹಲಿ ಇವರು ತಮ್ಮ ಪತ್ರ ಸಂಖ್ಯೆ: ಎಫ್.ನಂ.11-66/2004-ಎಫ್‌ಸಿ. ದಿನಾಂಕ:13-11-2007ರಲ್ಲಿ ಕಾಯ್ದಿಟ್ಟ ಅರಣ್ಯ ಪ್ರದೇಶಗಳ ಮೃಗಾಲಯಗಳಲ್ಲಿ ನಿರ್ವಹಣಾ ಯೋಜನೆಯನ್ವಯ ಅನುಮೋದಿತ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಲು ಅರಣ್ಯ (ಸಂರಕ್ಷಣಾ) ಕಾಯ್ದೆ, 1980 ಅನ್ವಯವಾಗುವುದಿಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಅಪಜೀ 150 ಎಫ್‌ಡಬ್ಲ್ಯೂಎಲ್ 2013,**
**ಬೆಂಗಳೂರು, ದಿನಾಂಕ: 27-09-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬಳ್ಳಾರಿ ನಗರದಲ್ಲಿ ಹಾಲಿಯಿರುವ ಮೃಗಾಲಯವನ್ನು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲ್ಲೂಕು ಕಮಲಾಪುರ ಗ್ರಾಮದ ಬಿಳಿಕಲ್ಲು ಪಶ್ಚಿಮ

..2

ಭಾಗದ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ "ಅಟಲ್ ಬಿಹಾರಿ ವಾಜಪೇಯಿ ಜ್ಯೂಯಾಲಜಿಕಲ್ ಪಾರ್ಕ್" ಎಂಬುದಾಗಿ ನಿರ್ಮಾಣ ಮಾಡಲು ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶದ ಈ ಕೆಳಕಂಡ ಗ್ರಾಮಗಳ ವಿವಿಧ ಸರ್ವೆ ನಂಬರುಗಳಲ್ಲಿನ ಒಟ್ಟು 141.59 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಕರ್ನಾಟಕ ಮೃಗಾಲಯ ಪ್ರಾಧಿಕಾರ, ಮೈಸೂರು ಇವರಿಗೆ ಹಸ್ತಾಂತರಿಸಲಾಗಿದೆ.

| ಗ್ರಾಮದ ಹೆಸರು | ಸರ್ವೆ ನಂ. | ಕಾಯ್ದಿಟ್ಟ ಅರಣ್ಯ ಪ್ರದೇಶ (ಹೆ.)ಗಳಲ್ಲಿ | ಪಟ್ಟ ಜಮೀನು (ಹೆ.)ಗಳಲ್ಲಿ |
|---|---|---|---|
| ಇಂಗಳಗಿ | 12 | - | 3.23 |
| | 13 | - | 2.91 |
| | 14 | 3.47 | - |
| | 15 | 3.65 | - |
| | 16 | - | 1.46 |
| | 18 | 9.34 | - |
| | 19 | 3.62 | - |
| | 28 | 30.26 | - |
| ಕಮಲಾಪುರ | 1080 | 61.96 | - |
| | 1082 | - | 6.33 |
| | 1083 | 2.82 | - |
| | 1084 | 1.10 | - |
| | 1085 | 2.22 | - |
| | 1086 | 3.20 | - |
| ಒಟ್ಟು | | 127.66 | 13.93 |

ಅರಣ್ಯ ಪ್ರದೇಶ -127.66 ಹೆ.

ಪಟ್ಟ ಜಮೀನು – 13.93 ಹೆ. (ಸದರಿ ಜಮೀನಿನಲ್ಲಿ ಅರಣ್ಯ ಇಲಾಖೆ ನೆಡುತೋಪು ಬೆಳೆಸಿದ್ದು 15 ವರ್ಷಗಳಿಂದ ಅರಣ್ಯ ಇಲಾಖೆಯ ಸುಪರ್ದಿನಲ್ಲಿರುತ್ತದೆ).

ಒಟ್ಟು ವಿಸ್ತೀರ್ಣ- 141.59 ಹೆ.ಗಳು

ಸೀಮಾರೇಖೆಯ ವಿವರಗಳು:-

(i) ಉತ್ತರಕ್ಕೆ: ಉತ್ತರದಲ್ಲಿ ಸೀಮಾರೇಖೆಯು ಕಮಲಾಪುರ ಗ್ರಾಮದ ಸರ್ವೆ ನಂ.1089ರ ದಕ್ಷಿಣ–ಪೂರ್ವ (ಆಗ್ನೇಯ) ಮೂಲೆಬಿಂದುವಿನಿಂದ 256 ಡಿಗ್ರಿ ಹಾಗೂ 471 ಮೀ ಅಂತರದಲ್ಲಿ ಒಂದನೇ ಬಿಂದುವಿನಿಂದ ಪ್ರಾರಂಭವಾಗಿ ಸರ್ವೆ ನಂ.1089ನ್ನು ಹೊರತುಪಡಿಸಿ ಪೂರ್ವ–ದಕ್ಷಿಣಾಭಿಮುಖವಾಗಿ ಚಲಿಸಿ 2ನೇ ಬಿಂದುವನ್ನು ಪೂರ್ವಾಭಿಮುಖವಾಗಿ ಚಲಿಸಿ 3 ಮತ್ತು 4ನೇ ಬಿಂದುವನ್ನು ಸೇರುತ್ತದೆ. ನಂತರ 4ನೇ ಬಿಂದುವಿನಿಂದ ದಕ್ಷಿಣಾಭಿಮುಖವಾಗಿ ಚಲಿಸಿ 5ನೇ ಬಿಂದುವನ್ನು ಪೂರ್ವಾಭಿಮುಖವಾಗಿ ಚಲಿಸಿ 6ನೇ ಬಿಂದುವನ್ನು ಸೇರಿ ನಂತರ 6ನೇ ಬಿಂದುವಿನಿಂದ ಉತ್ತರ–ಪೂರ್ವಾಭಿಮುಖವಾಗಿ ಚಲಿಸಿ 7ನೇ ಬಿಂದುವನ್ನು ಹಾಗೂ ಪೂರ್ವಾಭಿಮುಖವಾಗಿ ಚಲಿಸಿ 8ನೇ ಬಿಂದುವನ್ನು ಸರ್ವೆ ನಂಬರ್ 1080ರಲ್ಲಿ ಸೇರುತ್ತದೆ.

ಉತ್ತರದಲ್ಲಿ ಸೀಮಾರೇಖೆಯು ಈ ಕೆಳಕಂಡಂತೆ ಚಲಿಸುತ್ತದೆ.

| ಕ್ರಸಂ | ಬಿಂದುವಿನಿಂದ | ಬಿಂದುವಿಗೆ | ಬೇರಿಂಗ್ ಡಿಗ್ರಿಗಳಲ್ಲಿ | ಅಂತರ ಮೀಟರ್‌ಗಳಲ್ಲಿ |
|---|---|---|---|---|
| 1 | 1 | 2 | 102 | 153 |
| 2 | 2 | 3 | 83 | 379 |
| 3 | 3 | 4 | 74 | 93 |
| 4 | 4 | 5 | 159 | 150 |
| 5 | 5 | 6 | 90 | 214.6 |

(ii) ಪೂರ್ವ:- ಪೂರ್ವದಲ್ಲಿ ಸೀಮಾರೇಖೆಯು 8ನೇ ಬಿಂದುವಿನಿಂದ ಪ್ರಾರಂಭವಾಗಿ ದಕ್ಷಿಣಾಭಿಮುಖವಾಗಿ ಚಲಿಸಿ 9ನೇ ಬಿಂದುವನ್ನು ಸೇರಿ ನಂತರ ಪಶ್ಚಿಮಾಭಿಮುಖವಾಗಿ ಚಲಿಸಿ 10ನೇ ಬಿಂದುವನ್ನು ಹಾಗೂ ದಕ್ಷಿಣ-ಪಶ್ಚಿಮಾಭಿಮುಖವಾಗಿ ಚಲಿಸಿ 11ನೇ ಬಿಂದುವನ್ನು ಹಾಗೂ ಪಶ್ಚಿಮಕ್ಕೆ ಚಲಿಸಿ 12ನೇ ಬಿಂದುವನ್ನು ಸೇರಿ ನಂತರ ದಕ್ಷಿಣಾಭಿಮುಖವಾಗಿ ಚಲಿಸಿ 13ನೇ ಬಿಂದುವನ್ನು ಸೇರುತ್ತದೆ.

ಪೂರ್ವದಲ್ಲಿ ಸೀಮಾರೇಖೆಯು ಈ ಕೆಳಕಂಡಂತೆ ಚಲಿಸುತ್ತದೆ.

| ಕ್ರಸಂ | ಬಿಂದುವಿನಿಂದ | ಬಿಂದುವಿಗೆ | ಬೇರಿಂಗ್ ಡಿಗ್ರಿಗಳಲ್ಲಿ | ಅಂತರ ಮೀಟರ್‌ಗಳಲ್ಲಿ |
|---|---|---|---|---|
| 8 | 8 | 9 | 180 | 173.9 |
| 9 | 9 | 10 | 270 | 170.9 |
| 10 | 10 | 11 | 205 | 132.9 |
| 11 | 11 | 12 | 270 | 360.6 |
| 12 | 12 | 13 | 170 | 262.6 |

(iii) ದಕ್ಷಿಣಕ್ಕೆ:- ದಕ್ಷಿಣದಲ್ಲಿ ಸೀಮಾರೇಖೆಯು 13ನೇ ಬಿಂದುವಿನಿಂದ ಪ್ರಾರಂಭವಾಗಿ ದಕ್ಷಿಣ-ಪಶ್ಚಿಮಾಭಿಮುಖವಾಗಿ ಚಲಿಸಿ 14ನೇ ಬಿಂದುವನ್ನು ಸೇರಿ ನಂತರ 14ನೇ ಬಿಂದುವಿನಿಂದ ಉತ್ತರ-ಪಶ್ಚಿಮಾಭಿಮುಖವಾಗಿ ಚಲಿಸುತ್ತಾ ಇಂಗಳಗಿ ಮತ್ತು ಕಮಲಾಪುರ ಗ್ರಾಮಗಳ ಗಡಿರೇಖೆಯ ಮೂಲಕ ಹಾದು ಹೋಗಿ 15ನೇ ಬಿಂದುವನ್ನು ಇಂಗಳಗಿ ಗ್ರಾಮದ ಸರ್ವೆ ನಂ.28ರಲ್ಲಿ ಸೇರುತ್ತದೆ. ನಂತರ, ದಕ್ಷಿಣ-ಪಶ್ಚಿಮಾಭಿಮುಖವಾಗಿ ಚಲಿಸಿ 16 ಮತ್ತು 17ನೇ ಬಿಂದುಗಳನ್ನು ಸೇರುತ್ತವೆ. ನಂತರ 17 ಬಿಂದುವಿನಿಂದ ಇಂಗಳಗಿ ಗ್ರಾಮದ ಸರ್ವೆ ನಂ 12ರ ಆಗ್ನೇಯ ಮೂಲೆಯಿಂದ ಉತ್ತರ-ಪಶ್ಚಿಮಾಭಿಮುಖವಾಗಿ ಚಲಿಸುವ ರೇಖೆಯಿಂದ 40 ಮೀ. ಅಂತರದಲ್ಲಿ 17ಎ ಬಿಂದುವಿನಲ್ಲಿ ಸೇರಿ ಮುಂದೆ ರೇಖೆಯು ಸರ್ವೆ ನಂ.12ನ್ನು ಹೊರತುಪಡಿಸಿ ಅದರ ಪೂರ್ವ ಗಡಿಯಿಂದ ಉತ್ತರ-ಪಶ್ಚಿಮಾಭಿಮುಖವಾಗಿ ಚಲಿಸಿ ಸರ್ವೆ ನಂ 12, 1084 ಮತ್ತು ಸರ್ವೆ ನಂ 28 ಸೇರುವ ಇಂಗಳಗಿ ಮತ್ತು ಕಮಲಾಪುರದ ಗ್ರಾಮಗಳ ಗಡಿರೇಖೆಯನ್ನು ಸೇರಿ ನಂತರ ಇಂಗಳಗಿ ಗ್ರಾಮದ ಸರ್ವೆ ನಂ. 13, 12 ಕಮಲಾಪುರದ ಸರ್ವೆ ನಂ.1084, 1083 ಮತ್ತು 16 ಸೇರುವ ಇಂಗಳಗಿ ಮತ್ತು ಕಮಲಾಪುರ ಗ್ರಾಮಗಳ ಗಡಿರೇಖೆಯನ್ನು 17 ಬಿ ಬಿಂದುವನ್ನು ಸೇರಿ ನಂತರ ಇಂಗಳಗಿ ಗ್ರಾಮದ ಸರ್ವೆ ನಂ 16ನ್ನು ಹೊರತುಪಡಿಸಿ ಅದರ ಪೂರ್ವ ಗಡಿಯಿಂದ ಉತ್ತರಾಭಿಮುಖವಾಗಿ ಚಲಿಸಿ ಸರ್ವೆ ನಂ 16 ರಲ್ಲಿರುವ ಗಡಿರೇಖೆಯನ್ನು 17 ಸಿ ಯಲ್ಲಿ ಸಂಧಿಸಿ ನಂತರ ಪಶ್ಚಿಮಾಭಿಮುಖವಾಗಿ ಚಲಿಸಿ 17ಡಿ ಯನ್ನು ಇಂಗಳಗಿ ಗ್ರಾಮದ ಸರ್ವೆ 16 ಮತ್ತು 17 ಹಾಗೂ ಕಮಲಾಪುರ ಗ್ರಾಮದ ಸರ್ವೆ ನಂ. 1783 ಸೇರುವ 17 ಡಿ ಬಿಂದುವನ್ನು ಸೇರಿ ನಂತರ ಇಂಗಳಗಿ ಗ್ರಾಮದ ಸರ್ವೆ ನಂ.16ರ ಪಶ್ಚಿಮ ಗಡಿಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ ಇಂಗಳಗಿ ಗ್ರಾಮದ ಸರ್ವೆ ನಂ. 16, 15, 17, 14 ಸೇರುವ 17 ಇ ಬಿಂದುವನ್ನು ಸೇರಿ ನಂತರ ಸರ್ವೆ ನಂ. 16ರ ದಕ್ಷಿಣದ ಗಡಿಯಿಂದ ಪೂರ್ವಾಭಿಮುಖವಗಿ ಚಲಿಸಿ ಇಂಗಳಗಿ ಗ್ರಾಮದ ಸರ್ವೆ ನಂ. 16, 13, 12 ಮತ್ತು ಕಮಲಾಪುರ ಗ್ರಾಮದ ಸರ್ವೆ ನಂ. 1083 ಮತ್ತು 1084 ಸೇರುವ ಇಂಗಳಗಿ ಮತ್ತು ಕಮಲಾಪುರ ಗ್ರಾಮದ ಗಡಿರೇಖೆಯನ್ನು 17F ಬಿಂದುವನ್ನು ಸೇರಿ ನಂತರ ರೇಖೆಯು ಇಂಗಳಗಿ ಗ್ರಾಮದ ಸರ್ವೆ ನಂ.13ರ ಪಶ್ಚಿಮ ಗಡಿಯಿಂದ ದಕ್ಷಿಣಾಭಿಮುಖವಾಗಿ ಚಲಿಸಿ 17G ಬಿಂದುವಿನಿಂದ ಸೇರುತ್ತದೆ ನಂತರ ಪಶ್ಚಿಮ ಮುಖವಾಗಿ ಚಲಿಸಿ 19ನೇ ಬಿಂದುವನ್ನು ಸೇರಿ ನಂತರ 17ನೇ ಬಿಂದುವಿನಿಂದ ದಕ್ಷಿಣ-ಪಶ್ಚಿಮಾಭಿಮುಖವಾಗಿ ಚಲಿಸಿ ಇಂಗಳಗಿ ಗ್ರಾಮದ ಸರ್ವೆ ನಂ.12 ಮತ್ತು 13 ಇವುಗಳ ಮೂಲಕ ಹಾದು ಹೋಗಿ 18ನೇ ಬಿಂದುವನ್ನು ಸೇರಿ ನಂತರ ಇಂಗಳಗಿ ಗ್ರಾಮದ ಸರ್ವೆ ನಂ.13 ಮತ್ತು 14 ಮೂಲಕ ಹಾದು ಹೋಗಿ 19ನೇ ಬಿಂದುವನ್ನು ಸೇರಿ ನಂತರ ಪಶ್ಚಿಮ-ಉತ್ತರಾಭಿಮುಖವಾಗಿ ಚಲಿಸಿ ಇಂಗಳಗಿ ಗ್ರಾಮದ ಸರ್ವೆ ನಂ.14, 15, 18ರ ಮೂಲಕ ಹಾದು ಹೋಗಿ 20, 21, 22ನೇ ಬಿಂದುವನ್ನು ಸೇರುತ್ತದೆ.

ದಕ್ಷಿಣದಲ್ಲಿ ಸೀಮಾರೇಖೆಯು ಈ ಕೆಳಕಂಡಂತೆ ಚಲಿಸುತ್ತದೆ.

| ಕ್ರ.ಸಂ | ಬಿಂದುವಿನಿಂದ | ಬಿಂದುವಿಗೆ | ಬೇರಿಂಗ್ ಡಿಗ್ರಿಗಳಲ್ಲಿ | ಅಂತರ ಮೀಟರ್‌ಗಳಲ್ಲಿ |
|---|---|---|---|---|
| 13 | 13 | 14 | 233 | 204.8 |
| 14 | 14 | 15 | 293 | 241.9 |
| 15 | 15 | 16 | 251 | 447.9 |
| 16 | 16 | 17 | 230 | 447.0 |
| 17 | 17 | 18 | 235 | 371.6 |
| 18 | 18 | 19 | 279 | 187.4 |
| 19 | 19 | 20 | 307 | 127.2 |
| 20 | 20 | 21 | 286 | 118.6 |
| 21 | 21 | 22 | 259 | 136.3 |

(iv) <u>ಪಶ್ಚಿಮಕ್ಕೆ:-</u> ಪಶ್ಚಿಮದಲ್ಲಿ ಸೀಮಾರೇಖೆಯು 22ನೇ ಬಿಂದುವಿನಿಂದ ಪ್ರಾರಂಭವಾಗಿ ಉತ್ತರ-ಪಶ್ಚಿಮಾಭಿಮುಖವಾಗಿ ಚಲಿಸಿ ಇಂಗಳಗಿ ಗ್ರಾಮದ ಸರ್ವೆ ನಂ.18ರ ಮೂಲಕ ಹಾದು ಹೋಗಿ 23ನ್ನು ಉತ್ತರ-ಪೂರ್ವಾಭಿಮುಖವಾಗಿ ಚಲಿಸಿ 24, 25, 26, 27, 28ನೇ ಬಿಂದುಗಳನ್ನು ಸೇರುತ್ತದೆ. ನಂತರ 28ನೇ ಬಿಂದುವನ್ನು ಸೇರುತ್ತದೆ ಹಾಗೂ 28ನೇ ಬಿಂದುವಿನ ಹತ್ತಿರದಲ್ಲಿ ಕಮಲಾಪುರ ಗ್ರಾಮದ ಸರ್ವೆ ನಂ.1032 ಇದ್ದು, ಕಂದಾಯ ಜಮೀನು ಆಗಿದ್ದು, ಇದನ್ನು ಹೊರತುಪಡಿಸಿದ 28ನೇ ಬಿಂದುವಿನಿಂದ ರೇಖೆಯು ಇಂಗಳಗಿ ಮತ್ತು ಕಮಲಾಪುರ ಗ್ರಾಮಗಳ 28ನೇ ಬಿಂದುವಿನಿಂದ ಇಂಗಳಗಿ ಮತ್ತು ಕಮಲಾಪುರ ಗ್ರಾಮಗಳ ಗಡಿರೇಖೆಯ ಮೂಲಕ ಹಾಗೂ ಕಮಲಾಪುರ ಗ್ರಾಮದ ಸರ್ವೆ ನಂ.1080ರಲ್ಲಿ 29, 30ನೇ ಬಿಂದುಗಳನ್ನು ಸೇರಿ ನಂತರ 30ನೇ ಬಿಂದುವಿನಿಂದ ಮೂಲಸ್ಥಾನವಾದ 1ನೇ ಬಿಂದುವನ್ನು ಸೇರುತ್ತದೆ.

ಪಶ್ಚಿಮದಲ್ಲಿ ಸೀಮಾರೇಖೆಯು ಈ ಕೆಳಕಂಡಂತೆ ಚಲಿಸುತ್ತದೆ.

| ಕ್ರ.ಸಂ | ಬಿಂದುವಿನಿಂದ | ಬಿಂದುವಿಗೆ | ಬೇರಿಂಗ್ ಡಿಗ್ರಿಗಳಲ್ಲಿ | ಅಂತರ ಮೀಟರ್‌ಗಳಲ್ಲಿ |
|---|---|---|---|---|
| 22 | 22 | 23 | 326 | 238.5 |
| 23 | 23 | 24 | 34 | 138.2 |
| 24 | 24 | 25 | 72 | 136.3 |
| 25 | 25 | 26 | 65 | 66.2 |
| 26 | 26 | 27 | 46 | 384.6 |
| 27 | 27 | 28 | 34 | 182.8 |
| 28 | 28 | 29 | 55 | 155.2 |
| 29 | 29 | 30 | 74 | 107.4 |
| 30 | 30 | 1 | 46 | 381.1 |

<u>ಷರತ್ತುಗಳು:-</u>

1. ಬಳ್ಳಾರಿ ನಗರದಲ್ಲಿರುವ ಮೃಗಾಲಯವನ್ನು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಕಮಲಾಪುರ ಗ್ರಾಮದ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ಕೇಂದ್ರ ಮೃಗಾಲಯ ಪ್ರಾಧಿಕಾರದ ದಿನಾಂಕ: 18-12-2012ರ ಪತ್ರದಲ್ಲಿ ನಿರ್ದೇಶಿಸಿರುವಂತೆ ಕೇಂದ್ರ ಮೃಗಾಲಯ ಪ್ರಾಧಿಕಾರದ ಅಂತಿಮ ಅನುಮೋದನೆ ಪಡೆದು ಸ್ಥಳಾಂತರಿಸತಕ್ಕದ್ದು.

2. ಅಟಲ್ ಬಿಹಾರಿ ವಾಜಪೇಯಿ ಝೂಯಾಲಜಿಕಲ್ ಪಾರ್ಕ್‌ನ ಚಟುವಟಿಕೆಗಳಲ್ಲದೇ ಇನ್ನಿತರೇ ಯಾವುದೇ ಉದ್ದೇಶಕ್ಕೆ ಈ ಜಮೀನು ಬಳಸಿಕೊಳ್ಳತಕ್ಕದ್ದಲ್ಲ.

3. ಕರ್ನಾಟಕ ಮೃಗಾಲಯ ಪ್ರಾಧಿಕಾರವು ಈ ಜಾಗವನ್ನು ಬೇರೆ ಯಾವುದೇ ಸಂಘ ಸಂಸ್ಥೆ/ಖಾಸಗಿ ವ್ಯಕ್ತಿಗಳಿಗೆ ಮಾರಾಟ/ಗುತ್ತಿಗೆ/ಉಪ ಗುತ್ತಿಗೆ ನೀಡುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಪಿ. ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
(ವನ್ಯಜೀವಿ ಮತ್ತು ಯೋಜನೆಗಳು)

ಇವರಿಗೆ:

1) ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ, ಕರ್ನಾಟಕ ಮೃಗಾಲಯ ಪ್ರಾಧಿಕಾರ, ಶ್ರೀ ಜಯಚಾಮರಾಜೇಂದ್ರ ಮೃಗಾಲಯ ಆವರಣ, ಮೈಸೂರು-570 001.
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.